೮) ನೌಕರರನ್ನು ವರ್ಗಾವಣೆ ಮಾಡುವ ಜಿಲ್ಲಾ ಪರಿಷತ್ತುಗಳ ಅಧಿಕಾರವನ್ನು ಹಿಂತೆಗೆದು ಕೊಳ್ಳುವುದು;

೯) ಸರ್ಕಾರಿ ನೌಕರರಿಗೆ ಮಾಸಿಕ ರೂ. ೫೦-೦೦ ವೈದ್ಯಕೀಯ ಭತ್ಯೆ ನೀಡುವುದು;

೧೦) ಸ್ವಇಚ್ಛೆಯಿಂದ ನಿವೃತ್ತಿ ಹೊಂದುವ ಸರ್ಕಾರಿ ನೌಕರರ ಕನಿಷ್ಠ ಸೇವಾ ಮಿತಿಯನ್ನು ೨೦ ವರ್ಷದಿಂದ ೧೫ ವರ್ಷಕ್ಕೆ ಇಳಿಸುವುದು;

೧೧) ತುಟ್ಟಿಭತ್ಯೆಯ ಬಾಕಿ ಹಣವನ್ನು ರಾಷ್ಟ್ರೀಯ ಉಳಿತಾಯ ಪತ್ರದಲ್ಲಿ ತೊಡಗಿಸುವ ಬದಲು ನಗದು ರೂಪದಲ್ಲಿ ಕೊಡುವುದು;

೧೨) ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳೊಂದಿಗೆ ಮಾತುಕತೆ ನಡೆಸಿ ಈ ಮಾತುಕತೆಗಳನ್ವಯ ಸರ್ಕಾರವು ಹಾಗೂ ಸದರಿ ಪದಾಧಿಕಾರಿಗಳು ಈ ಕೆಳಕಂಡ ಬೇಡಿಕೆಗಳನ್ನು ಸಮಗ್ರವಾಗಿ (as a package) ಜಾರಿಗೊಳಿಸಲು ದಿನಾಂಕ: ೨೩-೪-೧೯೯೦ರಂದು ಪರಸ್ಪರ ಒಪ್ಪಿದ್ದಾರೆ.

೧) ಮನೆ ಬಾಡಿಗೆ ಭತ್ಯೆ ಮತ್ತು ನಗರ ಪರಿಹಾರ ಭತ್ಯೆ ನೀಡಲು ಒಂದು ಪೂರ್ವಾಡು ಮಾಡಿದ ಸೂತ್ರವನ್ನು ಆಳವಡಿಸುವುದು;

೨) ಸ್ವಯಂ ನಿವೃತ್ತಿಗೆ ಕನಿಷ್ಠ ಸೇವಾ ಮಿತಿಯನ್ನು ೨೦ ವರ್ಷಗಳಿಂದ ೧೫ ವರ್ಷಕ್ಕೆ ಇಳಿಸುವುದು;

೩) ಭಾರತದ ಯಾವುದೇ ಸ್ಥಳಕ್ಕೆ ಪ್ರಯಾಣ ಮಾಡುವ ರಜಾ ಪ್ರವಾಸ ರಿಯಾಯಿತಿ ಸೌಲಭ್ಯ ಕಲ್ಪಿಸಲು ಪೂರ್ವಾಡು ಮಾಡಿದ ಕಾರ್ಯ ಯೋಜನೆಯನ್ನು ಆಳವಡಿಸುವುದು.

೪) ಮೇಲಿನ ಕಾರಣಗಳಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎಂ. ವಿ. ವೆಂಕಟಪ್ಪ.— ಮಾನ್ಯ ಅಧ್ಯಕ್ಷರೇ, ನನ್ನ "ಈ ಪ್ರಶ್ನೆಗೆ ಮೇಲಿನ ಕಾರಣಗಳಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲವೆಂದು ಹೇಳಿದ್ದಾರೆ. ಮಿಕ್ಕ ಬೇಡಿಕೆಗಳನ್ನು ಸಹ ಈಡೇರಿಸುವುದಕ್ಕೆ ತೊಂದರೆ ಏನು ? ೧೧ ಬೇಡಿಕೆಗಳಲ್ಲಿ ೩ ಬೇಡಿಕೆಗಳನ್ನು ಒಪ್ಪಿಕೊಂಡಿದ್ದೀರಿ. ಮಿಕ್ಕ ಬೇಡಿಕೆಗಳನ್ನು ಈಡೇರಿಸುವುದಕ್ಕೆ ಸರ್ಕಾರಕ್ಕೆ ತೊಂದರೆ ಏನು ಎಂದು ಕೇಳುತ್ತಿದ್ದೇನೆ.

ಶ್ರೀ ಕೆ. ಹೆಚ್. ರಂಗನಾಥ್.— ಮಾನ್ಯ ಅಧ್ಯಕ್ಷರೇ, ಈಗಾಗಲೇ ಕೊಟ್ಟಿರುವ ಉತ್ತರದಲ್ಲಿ ಹೇಳಲಾಗಿದೆ. ಮ್ಯೂಚಿಯಲ್ ಆಗಿ ಒಂದು ಅಗ್ರಿಮೆಂಟ್ ಆದಮೇಲೆ ಅವರು ಸ್ಟ್ರೈಕ್ ವಾಪಸ್ ತೆಗೆದು ಕೊಂಡಿದ್ದಾರೆ. ಇದಕ್ಕೂ ಮೊದಲು ಒಂದು ಸಮಿತಿ ರಚನೆ ಆಗಿದ್ದು, ಆ ಸಮಿತಿ ಶಿಫಾರಸ್ ಮಾಡಿತ್ತು. ಆನಂತರ ನೌಕರರ ಅಸೋಸಿಯೇಷನ್‌ನವರು ಮತ್ತು ಸರ್ಕಾರದ ನಡುವೆ ಮಾತುಕತೆಯಾಗಿ ಸರ್ಕಾರವು ೩ ಬೇಡಿಕೆಗಳನ್ನು ಈಡೇರಿಸುವುದಕ್ಕೆ ಒಪ್ಪಿಕೊಂಡಿದ್ದರಿಂದ ಅವರು ಸ್ಟ್ರೈಕ್‌ನ್ನು ವಾಪಸ್ ತೆಗೆದುಕೊಂಡರು.

ಶ್ರೀ ಎಂ. ವಿ. ವೆಂಕಟಪ್ಪ.— ೩ ಬೇಡಿಕೆಗಳನ್ನು ಈಡೇರಿಸಿದ್ದಕ್ಕೆ ನೌಕರರು ತೃಪ್ತಿಯಾದರೆಂದು ತಾವು ಹೇಳುತ್ತೀರಾ ?

ಶ್ರೀ ಕೆ. ಹೆಚ್. ರಂಗನಾಥ್.— ಹೌದು.

ಪ್ರಶ್ನೆ ಸಂಖ್ಯೆ:೩೩೮೮

(ಮಾನ್ಯ ಸದಸ್ಯರಾದ ಷಫಿ ಅಹಮದ್ ಅವರು ಗೈರು ಹಾಜರಾಗಿದ್ದರು)

## ಮಹದೇಶ್ವರ ಬೆಟ್ಟದ ಮೇಲಿರುವ ದೇವಸ್ಥಾನದ ಆದಾಯದ ಬಗ್ಗೆ

*೩೩೮೮ ಶ್ರೀ ಜಿ. ರಾಜುಗೌಡ (ಹನೂರು).—ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೊಳ್ಳೇಗಾಲ ತಾಲ್ಲೂಕು ಮಹದೇಶ್ವರ ಬೆಟ್ಟದ ದೇವಸ್ಥಾನದಲ್ಲಿ ನಡೆಯುವ ಪೂಜೆ ಇನ್ನಿತರ ಕೈಂಕರ್ಯಗಳಲ್ಲಿ ಬರುವ ಆದಾಯದಲ್ಲಿ ಯಾವ ಯಾವ ಸಂಸ್ಥೆಗಳಿಗೆ ಅಥವಾ ಮಠಗಳಿಗೆ ಪಾಲು ದೊರೆಯುತ್ತದೆ, ಹಾಗೂ ಅದರ ಪೊತ್ತವೆಷ್ಟು ?

ಆ) ಇದನ್ನು ಯಾವ ಆಧಾರದ ಮೇಲೆ ಕೊಡಲಾಗುತ್ತದೆ ?

ಶ್ರೀ ಕೆ. ಹೆಚ್. ಪಾಟೀಲ್ (ಕಂದಾಯ ಮಂತ್ರಿಗಳು).—

ಆ) ಇಲ್ಲ. ಆದರೆ ದೇವಾಲಯದಲ್ಲಿ ನಡೆಯುವ ಪ್ರತಿ ಸೇವೆಯಲ್ಲಿ ೫೦ ಪೈಸೆಯಂತೆ ಬಹಳ ಹಿಂದಿನಿಂದಲೂ ಸಾಲೂರು ಮಠಾಧಿಪತಿಗಳಿಗೆ ದಕ್ಷಿಣೆ ನೀಡಲಾಗುತ್ತಿದೆ. ಪ್ರತಿ ತಿಂಗಳಿಗೆ ಸರಾಸರಿ ೧,೧೨೫-೦೦ ರೂ.ಗಳಾಗುತ್ತದೆ.

ಆ) ಧಾರ್ಮಿಕ ದತ್ತಿ ಆಯುಕ್ತರ ಆದೇಶದ ಸಂಖ್ಯೆ ಎಡಿಎಂ. ೩. ಸಿಆರ್ ೩೪೨/೭೫-೭೬, ದಿನಾಂಕ ೧೧-೯-೭೯ರ ಪ್ರಕಾರ.

ಶ್ರೀ ಜಿ. ರಾಜೂಗೌಡ.—ಸ್ವಾಮಿ, ಮಹದೇಶ್ವರ ದೇವಸ್ಥಾನದಲ್ಲಿ ನಡೆಯುವ ಪ್ರತಿ ಸೇವೆಯಲ್ಲಿ ೫೦ ಪೈಸೆಯಂತೆ ಬಹಳ ಹಿಂದಿನಿಂದಲೂ ಸಾಲೂರು ಮಠಾಧಿಪತಿಗಳಿಗೆ ರಕ್ಷಣೆ ನೀಡಲಾಗುತ್ತಿದೆಯೆಂದು ಮತ್ತು ಇದನ್ನು ಬಹಳ ಹಿಂದಿನ ಕಾಲದಿಂದಲೂ ಕೊಡಲಾಗುತ್ತಿದೆಯೆಂದು ತಮ್ಮ ಉತ್ತರದಲ್ಲಿ ಹೇಳಲಾಗಿದೆ. ಆದರೆ ಈ ರೀತಿ ಕೊಡುತ್ತಿರುವುದು ೧೯೭೯ನೇ ಇಸವಿಯಿಂದ ಮಾತ್ರ ಇದನ್ನು ತಡೆ ಹಿಡಿಯುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.—ಕೊಡುವುದು ನಿಜವಾಗಿದೆ. ಇದ್ದ ವಿಚಾರಗಳನ್ನು ತಮಗೆ ಹೇಳಿದ್ದೇನೆ.

ಶ್ರೀ ಜಿ. ರಾಜೂಗೌಡ.—ನನ್ನ ಪ್ರಶ್ನೆಯನ್ನು ಮಾನ್ಯ ಸಚಿವರು ಅರ್ಥಮಾಡಿಕೊಂಡಿಲ್ಲ ಎಂದು ಕಾಣುತ್ತದೆ. ದೇವಸ್ಥಾನಕ್ಕೆ ಆದಾಯ ಬಹಳ ವರ್ಷಗಳಿಂದ ಬರುತ್ತಾ ಇತ್ತು. ೧೯೭೯ರಲ್ಲಿ ದೇವಸ್ಥಾನದ ಆದಾಯ ಜಾಸ್ತಿಯಾದಾಗ ಪ್ರತಿಪೂಜೆಗೆ ೫೦ ಪೈಸೆಗಳ ದಕ್ಷಿಣೆಯನ್ನು ಕೊಡಬೇಕೆಂಬ ಒಂದು ತೀರ್ಮಾನವನ್ನು ಯಾವಾಗ ಮತ್ತು ಏತಕ್ಕಾಗಿ ತೆಗೆದುಕೊಂಡರು? ಆದಾಯವು ಅಧಿಕವಾದಾಗ ಆದಾಯದ ಪಾಲು ತೆಗೆದುಕೊಳ್ಳತಕ್ಕಂಥ ಒಂದು ದುರುದ್ದೇಶದಿಂದ ಈ ಕೆಲಸವನ್ನು ಮಾಡಿದ್ದಾರೆ ಎಂದು ನಾನು ಭಾವಿಸುತ್ತಾ ಇದ್ದೇನೆ. ಇದಕ್ಕೆ ತಮ್ಮ ಉತ್ತರವೇನು ?

ಶ್ರೀ ಕೆ. ಹೆಚ್. ಪಾಟೀಲ್.—ಮೊದಲಿನಿಂದಲೂ ಕೊಡುತ್ತಾ ಬಂದಿದ್ದನ್ನು ಮುಂದುವರಿಸಿದ್ದಾರೆ.

ಶ್ರೀ ಜಿ. ರಾಜೂಗೌಡ.—೧೯೭೯ರಿಂದ ಕೊಡುತ್ತಾ ಬಂದಿದ್ದಾರೆ. ಈ ಮೊದಲು ಕೊಡುತ್ತಿರಲಿಲ್ಲ. ಯಾವ ಆಧಾರದ ಮೇಲೆ ಇದನ್ನು ಕೊಡುತ್ತಾ ಇದ್ದೀರಿ ? ಮೊದಲು ಅವರಿಗೆ ಆದಾಯವನ್ನು ಕೊಡುತ್ತಾ ಇರಲಿಲ್ಲ ಈಗ ಹೊಸದಾಗಿ ಬಂದ ಕಾರಣದಿಂದ ಮತ್ತು ಯಾವ ದೇವಸ್ಥಾನದಿಂದ ಈ ಒಂದು ಲಾಭಾಂಶವನ್ನು ಪಡೆಯುತ್ತಾರೋ ಅಂಥ ವ್ಯಕ್ತಿ ದೇವಸ್ಥಾನದ ಧರ್ಮದರ್ಶಿ ಅಥವಾ ಅಧ್ಯಕ್ಷ ಆಗಬಹುದೇ ಎಂದು ಕೇಳುತ್ತಿದ್ದೇನೆ? ಹೀಗೆ ಲಾಭಾಂಶವನ್ನು ಪಡೆಯುತ್ತಿರುವ ವ್ಯಕ್ತಿ ಆ ದೇವಸ್ಥಾನದ ಧರ್ಮದರ್ಶಿ ಆಗಬಾರದು ಎಂದು ನನ್ನ ಪ್ರಶ್ನೆ.

ಶ್ರೀ ಕೆ. ಹೆಚ್. ಪಾಟೀಲ್.—ತಾವುಗಳು ಹೇಳಿದಂತೆ ಯಾರಾದರೂ ಅಂಥವರು ಧರ್ಮದರ್ಶಿಯಾಗಿ ಲಾಭವನ್ನು ಪಡೆಯುವವರಿದ್ದಾರೆ ಅಂಥವರು ಧರ್ಮದರ್ಶಿತ್ವವನ್ನು ಕಳೆದುಕೊಳ್ಳುತ್ತಾರೆ. ಅಂಥವರನ್ನು ತೆಗೆದುಹಾಕಲಿಕ್ಕೆ ಆಕ್ಟ್‌ನಲ್ಲಿ ಅವಕಾಶವೂ ಇದೆ. ಅಂಥಾದ್ದು ಏನಾದರೂ ಇದ್ದರೆ ಮಾನ್ಯ ಸದಸ್ಯರು ನಮ್ಮ ಗಮನಕ್ಕೆ ತಂದರೆ ಅಂಥವರನ್ನು ಆ ಸ್ಥಾನದಿಂದ ತೆಗೆದು ಹಾಕುತ್ತೇನೆ.

## ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

### ಖಾನಾಪುರದಲ್ಲಿ ಭಾಗ್ಯಲಕ್ಷ್ಮಿ ಸಕ್ಕರೆ ಕಾರ್ಖಾನೆಯ ಸ್ಥಾಪನೆ ಬಗ್ಗೆ

೮೪೨. ಶ್ರೀ ಕೆ. ಸಿ. ಪೊಡಗೇಕರ್ ದೇಸಾಯಿ (ಬಾಗೇವಾಡಿ).—ಮಾನ್ಯ ಸಹಕಾರ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನಲ್ಲಿ ಸ್ಥಾಪಿತವಾಗಬೇಕಾಗಿರುವ ಭಾಗ್ಯಲಕ್ಷ್ಮೀ ಸಹಕಾರ ಸಕ್ಕರೆ ಕಾರ್ಖಾನೆ ಈಗ ಯಾವ ಹಂತದಲ್ಲಿದೆ ?

ಆ) ಭಾಗ್ಯಲಕ್ಷ್ಮೀ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಲು ಸರ್ಕಾರವು ನಿರ್ಧರಿಸಿದ ಸ್ಥಳ ಯಾವುದು ?

ಇ) ನರಸಾಪುರದಿಂದ ಖಾನಾಪುರ ತಾಲ್ಲೂಕಿನ ಪಂಚಾಪುರಕ್ಕೆ ಸ್ಥಳವನ್ನು ಬದಲಾಯಿಸಲು ಕಾರಣವೇನು ?

ಈ) ಸರ್ಕಾರ್ಯಾಮಸ್ಥರು ಹಾಗೂ ಉದ್ದೇಶಿಸಿರುವ ಕಾರ್ಖಾನೆಯ ನಡುವೆ ಯಾವುದಾದರೂ ಒಪ್ಪಂದ ಏರ್ಪಟ್ಟಿತ್ತೇ ?